# ಅಲ್ಫಾನ್ಸೊ ಆಪೂಸಾದುದು ಹೀಗೆ...

■ ಸುಧೀಂದ್ರ ಪ್ರಸಾದ್ ಇ.ಎಸ್.

ಟ್ರಂಪ್ ಸರ್ಕಾರದ ಸುಂಕದ ಕಥೆ ಎಲ್ಲರಿಗೂ ತಿಳಿದಿದೆ. ಆದರೆ ಇದು ಅಮೆರಿಕದ ಇಂದಿನ ಕಥೆಯಲ್ಲ. ಹಿಂದಿನಿಂದಲೂ ಇದು ನಡೆದುಕೊಂಡೇ ಬಂದಿದೆ. 2008ರಲ್ಲಿ ಭಾರತ ಅಮೆರಿಕ ಸಹಿ ಹಾಕಿದ ‘ಮಾವು ಒಪ್ಪಂದ’ ಉಭಯ ದೇಶಗಳಿಗೆ ಅತ್ಯಂತ ಮಹತ್ವದ್ದು

ಎಲ್ಲಿಯ ಮಾವು ಎಲ್ಲಿಯ ಹಾರ್ಲೆ ಡೇವಿಡ್ಸನ್ ಬೈಕ್. ಆದರೂ ಮಾವು ಆಮದು ಮಾಡಿಕೊಳ್ಳುವ ಸಲುವಾಗಿಯೇ ಹಾರ್ಲೆ ಡೇವಿಡ್ಸನ್ ಬೈಕ್ ರಫ್ತಿಗೆ 2007ರಲ್ಲಿ ಅಮೆರಿಕ ಭಾರತದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು ಎನ್ನುವುದು ಆಶ್ಚರ್ಯವಾದರೂ ಸತ್ಯ.

2006ರಲ್ಲಿ ಭಾರತ ಭೇಟಿ ಸಂದರ್ಭದಲ್ಲಿ ಅಂದಿನ ಅಮೆರಿಕ ಅಧ್ಯಕ್ಷ ಜಾರ್ಜ್ ಬುಷ್ ಮಾಡಿಕೊಂಡ ಕೆಲ ಒಪ್ಪಂದಗಳಲ್ಲಿ ಮಾವು ರಫ್ತು ಕೂಡಾ ಒಂದು. ಹಣ್ಣಿನ ರಾಜ ಮಾವಿನ ಅಗತ್ಯ ಜಾಗತಿಕ ಮಟ್ಟದಲ್ಲಿರುವ ಬೇಡಿಕೆ, ಅದರಲ್ಲೂ ಭಾರತದ ಮಾವು ಜಗತ್ತಿನ ಪ್ರತಿಯೊಬ್ಬರ ಬಾಯಲ್ಲೂ ನೀರೂರಿಸುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

ಮಾವುಗಳಲ್ಲೂ ಹಲವು ಬಗೆ. ಅದರಲ್ಲೊಂದು ಧಾರವಾಡದ ಆಪೂಸು. 15ನೇ ಶತಮಾನದಲ್ಲಿ ಭಾರತಕ್ಕೆ ಬಂದ ಪೋರ್ಚುಗೀಸರು ತಮ್ಮ ಹಿಡಿತದಲ್ಲಿದ್ದ ಗೋವಾದಲ್ಲಿ ಬೆಳೆಯಲಾಗುತ್ತಿದ್ದ ಈ ಮಾವಿಗೆ ವೈಸ್‌ರಾಯ್ ಅಲ್ಫಾನ್ಸೊ ಡಿ ಅಲ್ಬುಕರ್ಖ್ ಎನ್ನುವವರ ಹೆಸರನ್ನೇ ಇಟ್ಟಿದ್ದರು. ಅದು ಈಗಲೂ ಅಲ್ಫಾನ್ಸೊ ಹೆಸರಿನಿಂದಲೇ ಕರೆಯಲ್ಪಡುತ್ತಿದೆ. 1510ರಲ್ಲಿ ಬಿಜಾಪುರ ಸುಲ್ತಾನರೊಂದಿಗಿನ ಯುದ್ಧದಲ್ಲಿ ಈತ ಗೋವಾವನ್ನು ಗೆದ್ದಿದ್ದ. ಈತ ಒಮನ್‌ನಿಂದ ಜಾವಾ ಹಾಗೂ ಸುಮಾತ್ರವರೆಗೂ ತನ್ನ ಹಿಡಿತ ಸ್ಥಾಪಿಸಿದ್ದ. ಹೀಗಾಗಿ ಈತನಿಗೆ ಡ್ಯೂಕ್ ಆಫ್ ಗೋವಾ ಎಂದೂ ಕರೆಯಲಾಗುತ್ತಿತ್ತು.



‘ಮ್ಯಾಗ್ನಿಫೆರಾ ಇಂಡಿಕಾ’ ಜೈವಿಕ ಹೆಸರಿನ ಈ ಮಾವಿನ ಮೂಲದ ಕುರಿತು ಸಾಕಷ್ಟು ಕಥೆಗಳಿವೆ. ಪೋರ್ಚುಗೀಸ್ ಅಧಿಕಾರಿ ಹರ್ಕಿಮಿಡೀಸ್ ಎಂಬಾತ ಈ ವಿಧದ ಕೆಲವು ಸಸ್ಯಗಳನ್ನು ಆಫ್ರಿಕಾದಿಂದ ತಂದನು. ಅಷ್ಟಕ್ಕೂ ಕೊಲಂಬಿಯಾ ಆಹಾರ ವಿನಿಮಯ ಕಾರ್ಯಕ್ರಮದಡಿ ಟೊಮ್ಯಾಟೊ, ಆಲೂಗೆಡ್ಡೆ, ಕೆಂಪು ಮೆಣಸು, ಮೆಕ್ಕೆ ಜೋಳ ಇತ್ಯಾದಿ ಬೆಳೆಗಳ ಜತೆ ಆಪೂಸ್ ಮಾವೂ ಭಾರತಕ್ಕೆ ಬಂತು ಎಂದು ಹೇಳಲಾಗುತ್ತದೆ.

ಮಾವಿನ ಸುಗ್ಗಿಯಲ್ಲಿ ಪೋರ್ಚುಗೀಸ್‌ನ ಪ್ರತಿಯೊಬ್ಬ ಅಧಿಕಾರಿಯ ಮೇಜಿನ ಮೇಲೆ ಸದಾ ಅಲ್ಫಾನ್ಸೊ ಹಣ್ಣು ಇರಬೇಕು ಎಂಬ ನಿಯಮವನ್ನೂ ಮಾಡಿದ್ದನು. ಹೀಗಾಗಿ ಪೋರ್ಚುಗೀಸರ ಹಿಡಿತದಲ್ಲಿನ ಪ್ರದೇಶಗಳಲ್ಲಿ ಅತ್ಯಂತ ಸೂಕ್ತವಾದ ರತ್ನಗಿರಿಯಲ್ಲಿ ಇದನ್ನು ಹೆಚ್ಚು ಬೆಳೆಯಲಾಗುತ್ತಿತ್ತು. ನಂತರದಲ್ಲಿ ಇದು ಧಾರವಾಡದತ್ತ ಹೊರಳಿತು. ಇಲ್ಲಿನ ಹವಾಗುಣ, ಮಣ್ಣಿನ ಸತ್ವಗಳಿಂದಾಗಿ ಇಂದಿಗೂ ಇದು ಧಾರವಾಡದ ಆಪೂಸು ಎಂದೇ ಹೆಸರು.

**4000 ಕೋಟಿ**
ರಾಜ್ಯದಲ್ಲಿ ಪ್ರತಿ ವರ್ಷ ನಡೆಯುವ ಮಾವಿನ ಅಂದಾಜು ವಹಿವಾಟು

ಸುಮಾರು 350–400 ಗ್ರಾಂ ತೂಗುತ್ತವೆ. ಮಾರ್ಚ್ ಕೊನೆಯ ವಾರ ಮತ್ತು ಜೂನ್ ನಡುವೆ ಈ ಹಣ್ಣುಗಳು ಸಿಗುತ್ತವೆ. ಹೆಚ್ಚು ದಿನದವರೆಗೆ ಕೆಡದ ಈ ತಳಿ ರಫ್ತಿಗೆ ಸೂಕ್ತವಾಗಿದೆ.

### ತೋತಾಪುರಿ

ಗಾತ್ರದಲ್ಲಿ ದೊಡ್ಡದಾಗಿರುವ ಮತ್ತು ಗಿಣಿಯಂತೆ ಕಾಣುವ ವಿಶಿಷ್ಟ ಮಾವಿನ ವಿಧವಾಗಿದೆ. ಮೊನಚಾದ ತುದಿ ಮತ್ತು ದಪ್ಪ ಸಿಪ್ಪೆಯನ್ನು ಹೊಂದಿದೆ. ತೋತಾಪುರಿ ಮಾವನ್ನು ಸಾಮಾನ್ಯವಾಗಿ ದಕ್ಷಿಣ ಭಾರತದ, ವಿಶೇಷವಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಬೆಳೆಯುವ ವಾಣಿಜ್ಯ ವಿಧವಾಗಿದೆ. ಗುಜರಾತ್ ಮತ್ತು ಮಹಾರಾಷ್ಟ್ರದಂತಹ ಪಶ್ಚಿಮ ರಾಜ್ಯಗಳಲ್ಲಿಯೂ ಜನಪ್ರಿಯವಾಗಿದೆ. ಇದಕ್ಕೆ ಬೆಂಗಳೂರ, ಚಿತ್ತೂರ ಎಂತಲೂ ಕರೆಯುವುದುಂಟು. ವಿಶಿಷ್ಟ ಪರಿಮಳ ಹಾಗೂ ರುಚಿಯ ಈ ಹಣ್ಣುಗಳು ಬಂಗಾರದ ಹಳದಿ



ಮಾವಿನಕಾಯಿಗಳನ್ನು ವಾಹನಕ್ಕೆ ತುಂಬಿಸುತ್ತಿರುವ ಕಾರ್ಮಿಕರು

ಚಿತ್ರ: ಚಂದ್ರೇಗೌಡ